ಸ್ಥಾಪನೆ : 1934

ಮೊಬೈಲ್ : 9380301904
ದೂರವಾಣಿ : 22281848

# ಬಬ್ಬೂರುಕಮ್ಮೆ ಸೇವಾ ಸಮಿತಿ (ರಿ.)

ದಿವಾನ್ ಬಹದ್ದೂರ್ ಕೆ. ರಾಮಸ್ವಾಮಿ ವಿದ್ಯಾರ್ಥಿ ನಿಲಯ
ನಂ. 17, ಶೇಷಾದ್ರಿ ರಸ್ತೆ, ಬೆಂಗಳೂರು – 560009

Reg. No. 246/34-35

# ಕ್ಷೇಮ ಸಮಾಚಾರ ಪತ್ರಿಕೆ

ಸಂಪುಟ 36, ಸಂಚಿಕೆ 13 ಆಂತರಿಕ ಪತ್ರಿಕೆ ಏಪ್ರಿಲ್ – 2025



## ಜಗದ್ಗುರು ಶ್ರೀ ಶಂಕರಾಚಾರ್ಯರ ಜಯಂತಿ

02.05.2025, ಶುಕ್ರವಾರ



## “ಆಚಾರ್ಯ ಬಿ.ಎಂ.ಶ್ರೀ”

ಪ್ರಶಸ್ತಿ–2024, ಸ್ವೀಕರಿಸಿದ

ಡಾ. ಗುರುರಾಜ್ ವಿ ಕರಜಗಿ ಅವರು

# ಬಬ್ಬೂರುಕಮ್ಮೆ ಸೇವಾ ಸಮಿತಿ (ರಿ.)

ದಿವಾನ್ ಬಹದ್ದೂರ್ ಕೆ. ರಾಮಸ್ವಾಮಿ ವಿದ್ಯಾರ್ಥಿ ನಿಲಯ,

Reg.No. 246/34-35 ನಂ. 17, ಶೇಷಾದ್ರಿ ರಸ್ತೆ, ಬೆಂಗಳೂರು – 560 009. ದೂರವಾಣಿ : 080–22281848

## ಆಡಳಿತ ಮಂಡಳಿ–2020–25



ಡಾ|| ಎ.ವಿ. ಪ್ರಸನ್ನ
ಅಧ್ಯಕ್ಷರು



ಡಾ|| ಬಿ.ಕೆ. ಪ್ರಭಾಕರ್
ಉಪಾಧ್ಯಕ್ಷರು



ಡಾ|| ಎನ್. ಸತ್ಯಪ್ರಕಾಶ್
ಗೌ|| ಕಾರ್ಯದರ್ಶಿ



ಶ್ರೀ ಹೆಚ್.ಎಂ. ನಾಗಭೂಷಣ
ಖಜಾಂಚಿ



ಶ್ರೀ ಕೆ.ಆರ್. ಉದಯಕುಮಾರ್
ಸಹಕಾರ್ಯದರ್ಶಿ



ಶ್ರೀ ರಮೇಶ್ ಜೋಯಿಸ್ ಎಂ.ವಿ
ಆಂತರಿಕ ಲೆಕ್ಕಪರಿಶೋಧಕರು

## ಸದಸ್ಯರುಗಳು




ಶ್ರೀ ಜಿ.ವಿ. ರಮೇಶ್



ಶ್ರೀಮತಿ ಕೆ. ಶೀಲಾ



ಶ್ರೀ ಗುರುದತ್ತ ಪಿ.ಎಸ್



ಶ್ರೀ ನಾಗರಾಜ್ ಕೆ.ಎಸ್



ಶ್ರೀ ಎನ್. ಶಿವಮೂರ್ತಿ



ಶ್ರೀಮತಿ ಸುಮಾ ಪ್ರಕಾಶ್

## ಕೋ–ಆಪ್ಟೆಡ್ ಸದಸ್ಯರು



ಶ್ರೀ ನಾಗರಾಜ್ ಎಸ್.ಎಂ



ಶ್ರೀಮತಿ ಸುಧಾ ಪ್ರಸಾದ್



ಶ್ರೀ ಎಲ್.ಎನ್. ಪ್ರಸಾದ್



ಶ್ರೀ ಜಿ.ಎಸ್.ಟಿ.ಪ್ರಭು



ಶ್ರೀ ಕೆ.ವಿ.ನಾಗೇಶ್

ಸ್ಥಾಪನೆ : 1934

# ಬಬ್ಬೂರುಕಮ್ಮೆ ಸೇವಾ ಸಮಿತಿ (ರಿ.)

ದಿವಾನ್ ಬಹದ್ದೂರ್ ಕೆ. ರಾಮಸ್ವಾಮಿ ವಿದ್ಯಾರ್ಥಿ ನಿಲಯ, ನಂ. 17, ಶೇಷಾದ್ರಿ ರಸ್ತೆ, ಬೆಂಗಳೂರು-560009.
ದೂ.: 22281848, 9380301904 । ವೆಬ್‌ಸೈಟ್ : www.babboorkamme.org

## ಆಹ್ವಾನ ಪತ್ರಿಕೆ

## ಜಗದ್ಗುರು ಶ್ರೀ ಶಂಕರಾಚಾರ್ಯರ ಜಯಂತಿ

**ಹಾಗೂ ಬಬ್ಬೂರುಕಮ್ಮೆ ಇಬ್ಬರು ಸಾಧಕರಿಗೆ ವಿಶ್ವ ವಿಪ್ರತ್ರಯೀ ಪರಿಷತ್ ಕೊಡ ಮಾಡುವ**

## ಶ್ರೀ ಶಂಕರ ಪ್ರಶಸ್ತಿ ಪ್ರದಾನ ಸಮಾರಂಭ

**ಪ್ರಶಸ್ತಿ ಸ್ವೀಕರಿಸುವವರು :**

**ಶ್ರೀ ಆಹಿತಾಗ್ನಿ ಪ್ರದೀಪ ಶರ್ಮ ಹಾಗೂ ವೇದ ಬ್ರಹ್ಮ ಶ್ರೀ ಗಿರೀಶ್ ಜೊಯಿಸ್**

**ದಿನಾಂಕ** : 02-05-2025 ನೇ ಶುಕ್ರವಾರ, ವೈಶಾಖ ಶುದ್ಧ ಪಂಚಮಿಯಂದು
**ಬೆಳಗ್ಗೆ** : 10-30 ಘಂಟೆಗೆ ಸಮಿತಿಯ ಸಭಾಂಗಣದಲ್ಲಿ ಆಚರಿಸಲಾಗುವುದು.

**ಮುಖ್ಯ ಅತಿಥಿಗಳು :**

### ಶ್ರೀ ಎಸ್. ಸೂರ್ಯಪ್ರಕಾಶ ಪಂಡಿತ್

ಮುಖ್ಯ ಉಪ ಸಂಪಾದಕ, ಪ್ರಜಾವಾಣಿ

**ವಿಶೇಷ ಅತಿಥಿಗಳು :**

### ನ್ಯಾಯಮೂರ್ತಿ ಎನ್. ಕುಮಾರ್

ನಿವೃತ್ತ ನ್ಯಾಯಾಧೀಶರು, ಕರ್ನಾಟಕ ಉಚ್ಚನ್ಯಾಯಾಲಯ

### ಶ್ರೀ ರಘುನಾಥ್

ಅಧ್ಯಕ್ಷರು, ವಿಶ್ವ ವಿಪ್ರತ್ರಯೀ ಪರಿಷತ್

**ಅಧ್ಯಕ್ಷತೆ :**

### ಡಾ॥ ಎ.ವಿ. ಪ್ರಸನ್ನ

ಅಧ್ಯಕ್ಷರು, ಬಬ್ಬೂರುಕಮ್ಮೆ ಸೇವಾ ಸಮಿತಿ, ಬೆಂಗಳೂರು

**ಸಮಿತಿಯ ಅಧ್ಯಕ್ಷರಾದ ಡಾ. ಎನ್. ಸತ್ಯಪ್ರಕಾಶ್ ಹಾಗೂ ಶ್ರೀಮತಿ ವಿಶಾಲಾಕ್ಷಿ ದಂಪತಿಗಳು ಜಗದ್ಗುರುಗಳ ಪೂಜೆಯನ್ನು ನಡೆಸಿಕೊಡಲಿದ್ದಾರೆ.**

ತಾವುಗಳು ಬಂಧು, ಬಾಂಧವರೊಡನೆ ಆಗಮಿಸಿ ಶ್ರೀ ಶಂಕರಾಚಾರ್ಯರ ಜಯಂತಿಯಲ್ಲಿ ಭಾಗವಹಿಸಿ ಗುರುಕೃಪೆಗೆ ಪಾತ್ರರಾಗಬೇಕಾಗಿ ಕೋರಿ ತಮ್ಮೆಲ್ಲರಿಗೂ ಸ್ವಾಗತವನ್ನು ಬಯಸುತ್ತೇವೆ.

ಆಡಳಿತ ಮಂಡಳಿಯ ಪರವಾಗಿ
**ಡಾ. ಎನ್. ಸತ್ಯಪ್ರಕಾಶ್**
ಕಾರ್ಯದರ್ಶಿ

ಕಾರ್ಯಕ್ರಮದ ನಂತರ ಪ್ರಸಾದ ಭೋಜನ ವ್ಯವಸ್ಥೆ ಇರುತ್ತದೆ.



# ಜಗದ್ಗುರು ಶ್ರೀ ಶಂಕರಾಚಾರ್ಯರ ಜಯಂತಿ

### ಹಾಗೂ ವಿಶ್ವ ವಿಪ್ರತ್ರಯೀ ಪರಿಷತ್ ಕೂಡ ಮಾಡುವ

# ಶ್ರೀ ಶಂಕರ ಪ್ರಶಸ್ತಿ ಪ್ರದಾನ ಸಮಾರಂಭ

## ಕಾರ್ಯಕ್ರಮಗಳು

ಬೆಳಗ್ಗೆ : 8-30 ರಿಂದ 9.45 ರವರೆಗೆ ಆಚಾರ್ಯ ಶಂಕರರಿಗೆ ಅಭಿಷೇಕ,
ಪೂಜೆ, ಮಹಾಮಂಗಳಾರತಿ ಹಾಗೂ ಪಾನಕಪೂಜೆ

ಬೆಳಗ್ಗೆ 10.00 ರಿಂದ 10.30 & ಸಾಂಸ್ಕೃತಿಕ ಕಾರ್ಯಕ್ರಮ
ವಿದ್ವಾನ್ ಎಸ್.ಎಂ. ನಾಗಚೇತನ್ ಅವರಿಂದ ಶ್ರೀ ಶಾಂಕರ ಸ್ತೋತ್ರ ಗಾಯನ
10.45 ರಿಂದ ಸಭಾ ಕಾರ್ಯಕ್ರಮ

* ಪ್ರಾರ್ಥನೆ
* ಸ್ವಾಗತ ಹಾಗೂ ಪರಿಚಯ – ಕಾರ್ಯದರ್ಶಿಗಳಿಂದ
* ಅತಿಥಿಗಳಿಗೆ ಗೌರವಾರ್ಪಣೆ – ಅಧ್ಯಕ್ಷರಿಂದ
* ಶ್ರೀ ಶಂಕರ ಜಯಂತಿ ಉಪನ್ಯಾಸ – ಮುಖ್ಯ ಅತಿಥಿಗಳಿಂದ
* ಬಬ್ಬೂರುಕಮ್ಮೆ ವೇದ ವಿದ್ವಾಂಸರುಗಳಿಗೆ ಶ್ರೀ ಶಂಕರ ಪ್ರಶಸ್ತಿ ಪ್ರದಾನ
* ಪ್ರಶಸ್ತಿ ಪತ್ರ ವಾಚನ
* ಶ್ರೀ ಶಂಕರ ಪ್ರಶಸ್ತಿ ಪುರಸ್ಕೃತರ ನುಡಿಗಳು
* ವಿಶೇಷ ಅತಿಥಿಗಳಿಂದ ನುಡಿಗಳು
* ಅಧ್ಯಕ್ಷರ ನುಡಿಗಳು
* ವಂದನಾರ್ಪಣೆ : ಡಾ. ಬಿ.ಕೆ. ಪ್ರಭಾಕರ್
* ನಿರೂಪಣೆ : ಶ್ರೀ ಶಿವಮೂರ್ತಿ ಎನ್., ಸದಸ್ಯರು ಕಾರ್ಯಕಾರಿ ಮಂಡಳಿ
* ಪ್ರಸಾದ ಭೋಜನ



# ಅಧ್ಯಕ್ಷರ ನುಡಿ.....

**ಆತ್ಮೀಯ ಬಬ್ಬೂರು ಕಮ್ಮೆ ಬಾಂಧವರೆಲ್ಲರಿಗೂ ನಮಸ್ಕಾರಗಳು.**

ಮುಂಬರುವ 02.05.2025 ರಂದು ಶುಕ್ರವಾರ ದೇಶಾದ್ಯಂತ, ಶ್ರೀ. ಶ್ರೀ. ಶಂಕರ ಭಗವತ್ಪಾದರ ಜಯಂತಿಯನ್ನು ಆಚರಿಸಲಾಗುತ್ತಿದೆ. ಅದೇ ದಿನ ನಮ್ಮ ಬಬ್ಬೂರು ಕಮ್ಮೆ ಸೇವಾ ಸಮಿತಿಯಲ್ಲಿ ಸಹ ಶ್ರೀ. ಶಂಕರ ಜಯಂತಿಯ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಬಬ್ಬೂರು ಕಮ್ಮೆ ಶಂಕರ ಜಯಂತಿಯೆಂದರೆ ಬೆಂಗಳೂರಿನ ಎಲ್ಲಾ ಬ್ರಾಹ್ಮಣ ಸಮಾಜದವರು ಗೌರವದಿಂದ ನೋಡುವಷ್ಟು ಮಟ್ಟಿಗೆ ನಮ್ಮ ಕಾರ್ಯಕ್ರಮವು ವೈವಿಧ್ಯಮಯವಾಗಿರುತ್ತವೆ ಮತ್ತು ಅಚ್ಚುಕಟ್ಟಾಗಿರುತ್ತವೆ.

ಈ ಯಶಸ್ಸಿಗೆ, ಬಹು ಮುಖ್ಯ ಕಾರಣವೆಂದರೆ ಅತಿ ಹೆಚ್ಚಿನ ಸಂಖ್ಯೆಯಲ್ಲಿ ನಮ್ಮ ಸಮಾಜ ಬಾಂಧವರು ಭಾಗವಹಿಸುತ್ತಿರುವುದು ಮತ್ತು ವರ್ಷದಿಂದ ವರ್ಷಕ್ಕೆ ಈ ಸಂಖ್ಯೆ ಹೆಚ್ಚುತ್ತಲೇ ಇರುವುದು. ಈ ವರ್ಷವೂ ಅತಿ ಹೆಚ್ಚಿನ ಸಂಖ್ಯೆಯಲ್ಲಿ ನೀವುಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ, ಶ್ರೀಮದಾಚಾರ್ಯರಿಗೆ ನಮ್ಮ ಭಕ್ತಿಪೂರ್ವಕ ಗೌರವಗಳನ್ನು ಸಮರ್ಪಿಸೋಣವೆಂದು ಮನವಿ ಮಾಡುತ್ತೇನೆ.

ನಮ್ಮ ಅನೇಕ ಸದಸ್ಯರು ಶ್ರೀ. ಶಂಕರ ಜಯಂತಿಗಾಗಿ ಪುದುವಟ್ಟು ನಿಧಿಯನ್ನು ನಮ್ಮ ಸಮಿತಿಗೆ ನೀಡಿರುತ್ತಾರೆ.  ಅವರೆಲ್ಲರಿಗೂ ನನ್ನ ಹಾರ್ದಿಕ ವಂದನೆ ಅಭಿನಂದನೆಗಳು.

ಗೌರವಗಳೊಂದಿಗೆ
ತಮ್ಮವನೇ ಆದ
**ಡಾ॥ ಎ.ವಿ. ಪ್ರಸನ್ನ**
ಅಧ್ಯಕ್ಷರು ಹಾಗೂ ಪ್ರಧಾನ ಸಂಪಾದಕರು

**ದಿನಾಂಕ : 21.03.2025**

**ಸ್ಥಳ : ಬೆಂಗಳೂರು.**

# ಸಂಪಾದಕರ ನುಡಿ.....

ಆತ್ಮೀಯ ಬಂಧುಗಳೇ,

ಸಾದರ ಪ್ರಣಾಮಗಳು. ಶ್ರೀ ವಿಶ್ವಾವಸುನಾಮ ಸಂವತ್ಸರದ ಹೊಸ ವರುಷ ಯುಗಾದಿಯ ನಂತರ ಶ್ರೀ ಶಂಕರ ಭಗವತ್ಪಾದರ ಜಯಂತಿಯನ್ನು ಮೇ 2ರಂದು ಶುಕ್ರವಾರ ನಡೆಸಲಾಗುತ್ತದೆ. ಶಂಕರರು ಜೀವನದ ಎಲ್ಲಾ ಆಯಾಮಗಳನ್ನು ಸಂಸ್ಕರಿಸಿ ಉದಾತ್ತೀಕರಿಸಿದವರು. ಲೋಕದಲ್ಲಿ ಧರ್ಮಗ್ಲಾನಿಯುಂಟಾದಾಗ ಧರ್ಮದ ಪುನಃಸ್ಥಾಪನೆಗಾಗಿ ಭಗವದವತಾರವಾಗುತ್ತದೆ ಎಂಬ ನಂಬಿಕೆಗೆ ಶ್ರೀ ಶಂಕರರು ಅವಿರ್ಭಾವಗೊಂಡದ್ದು ಮತ್ತು ಅವರ ಜೀವನ ಸಾಧನೆ ಉತ್ಕೃಷ್ಟ ನಿದರ್ಶನವಾಗಿದೆ. ಶಂಕರರು ಬೌದ್ಧಿಕ ಸ್ತರದಲ್ಲಿ ವೇದಾಂತದರ್ಶನದ ತಳಹದಿ ರೂಪಿಸಿದರು. ಎಲ್ಲರಿಗೂ ಅಂಗೀಕಾರವಾಗುವ ಪೂಜಾ ಪದ್ಧತಿಯನ್ನು ವಿನ್ಯಾಸಗೊಳಿಸಿದರು. ನಾಲ್ಕು ವೇದಗಳನ್ನು ಪ್ರತಿನಿಧಿಸುವಂತೆ ದೇಶದ ನಾಲ್ಕೂ ದಿಕ್ಕಿನಲ್ಲಿ ನಾಲ್ಕು ಆಮ್ನಾಯಪೀಠಗಳನ್ನು ಸ್ಥಾಪಿಸಿದರು. ಹಾಗಾಗಿ ಶ್ರೀ ಶಂಕರರು ಕೇವಲ ದಾರ್ಶನಿಕರಷ್ಟೇ ಅಲ್ಲದೆ ಅಸಮಾನ ಸಮಾಜ ಸಂಘಟಕರೂ ಆಗಿದ್ದರು. ಪಾರಮಾರ್ಥಿಕ ಮತ್ತು ಸಾಮಾಜಿಕ ಈ ಎರಡೂ ಆಯಾಮಗಳಲ್ಲಿ ಶಂಕರಭಗವತ್ಪಾದರಿಂದ ಮೌಲ್ಯ ಸಂಸ್ಥಾಪನೆಯಾಯಿತು. ಭಗವಂತನ ಸರ್ವವ್ಯಾಪಿತ್ವ ಕಾರಣದಿಂದ ಸರ್ವಸಮಾನತೆ ಮತ್ತು ಜ್ಞಾನ ಪಾರಮ್ಯದ ಕಾರಣದಿಂದ ನಿರ್ಭೀತಿ ಇವು ಶಂಕರರ ವೇದಾಂತದ ಎರಡು ಪ್ರಮುಖ ಸರ್ವಕಾಲೀನ ಮೌಲ್ಯಗಳಾಗಿವೆ. ಶಂಕರರ ಮೌಲ್ಯಗಳ ಆಚರಣೆಗೆ ನಮಗೆ ನಾವೇ ಸಂಕಲ್ಪಮಾಡಿಕೊಳ್ಳಬೇಕಾದ ಒಂದು ಸದವಕಾಶವಾಗಿದೆ.

ಶಂಕರರ ತತ್ವ ಸಿದ್ಧಾಂತಗಳನ್ನು ಅರಿಯುವ, ತನ್ಮೂಲಕ ನಮ್ಮೊಳಗಿನ ಬುದ್ಧಿ, ಭಾವಗಳನ್ನು ನೋಡುವ ನಾನು ಎಂಬ ಪರಂಜ್ಯೋತಿಯ ಸಾಕ್ಷಾತ್ಕಾರ ಮಾಡಿಕೊಳ್ಳುವ ಒಂದು ತಪಸ್ಸಿಗೆ ಅಣಿಯಾಗಬೇಕಾದ ದಿನ. ಸಮುದಾಯದ ಯುವಕರು ಹೆಚ್ಚು ಹೆಚ್ಚು ಶಂಕರರ ಜೀವನ ಸಾಧನೆ ಮತ್ತು ಅವರ ತತ್ವ ಸಿದ್ಧಾಂತಗಳ ಅಧ್ಯಯನ ಮಾಡಬೇಕು. ತನ್ಮೂಲಕ ಚಿತ್ತಶುದ್ಧಿ, ಜ್ಞಾನನಿಷ್ಠೆ ಪಡೆದು ಲೋಕೋತ್ತರವಾದ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕು.


ಶ್ರೀ ಶಂಕರಭಗವತ್ಪಾದರ ಜಯಂತಿಯನ್ನು ಎಂದಿನಂತೆ ಸಮಿತಿಯು ಮೇ 2ರಂದು ಶುಕ್ರವಾರ ಬಬ್ಬೂರು ಕಮ್ಮೆ ಸೇವಾಸಮಿತಿಯ ಸಮುದಾಯ ಭವನದಲ್ಲಿ ಆಚರಿಸಲಿದ್ದು ಎಲ್ಲಾ ಸಮುದಾಯ ಬಾಂಧವರು ಭಾಗವಹಿಸಿ ಶ್ರೀ ಶಂಕರರ ಕೃಪಾಶೀರ್ವಾದಗಳಿಗೆ ಪಾತ್ರರಾಗಬೇಕೆಂದು ಕೋರುತ್ತಿದ್ದೇವೆ. ಸಮಿತಿಯ ಕಾರ್ಯಕ್ರಮದಲ್ಲಿ ಭಾಗವಹಿಸಲು ಸಾಧ್ಯವಾಗದವರು ತಮ್ಮ ತಮ್ಮ ಮನೆಗಳಲ್ಲಿ, ಊರುಗಳಲ್ಲಿ ಶಂಕರ ಭಗವತ್ಪಾದರ ಜಯಂತಿ ಆಚರಿಸಿ ಉಪನ್ಯಾಸ, ಸೌಂದರ್ಯಲಹರಿ, ವಿಷ್ಣುಷಟ್ಪದೀ ಸ್ತೋತ್ರ, ಮೋಹಮುದ್ಗರಃ ಪಠಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಶಂಕರರ ಮೌಲ್ಯ, ಸಿದ್ಧಾಂತಗಳನ್ನು ಪ್ರಚುರಪಡಿಸುವ ಮಹತ್ಕಾರ್ಯದಲ್ಲಿ ತೊಡಗಿಕೊಳ್ಳಬೇಕೆಂಬುದು ಎಲ್ಲರ ಆಶಯವಾಗಿರಲಿ. ಯೋಗಕ್ಷೇಮ ಸಮಾಚಾರ ಪತ್ರಿಕೆಯ ಪ್ರಧಾನ ಸಂಪಾದಕರೂ, ಸಮಿತಿಯ ಅಧ್ಯಕ್ಷರೂ ಆದ ಡಾ.ಎ.ವಿ.ಪ್ರಸನ್ನ ಅವರಿಗೆ, ಪತ್ರಿಕೆಯ ಸಂಚಾಲಕ ತುರುವೇಕೆರೆ ಪ್ರಸಾದ್, ಸದಸ್ಯರಾದ ಶ್ರೀಮತಿ ಕೆ.ಶೀಲಾ, ಶ್ರೀಮತಿ ಸುಮಾ ಪ್ರಕಾಶ್ ಹಾಗೂ ಸಮಿತಿಯ ಎಲ್ಲಾ ಸದಸ್ಯರಿಗೆ ನಾನು ಆಭಾರಿ. ಶ್ರೀ ಶಂಕರರು ಸರ್ವರಿಗೂ ಸನ್ಮಂಗಳವನ್ನುಂಟು ಮಾಡಲಿ. ಸರ್ವೇ ಜನಾಃ ಸುಖಿನೋ ಭವಂತು.

ಇಂತೀ

**ಡಾ. ಎನ್. ಸತ್ಯಪ್ರಕಾಶ್**

ಗೌ॥ ಕಾರ್ಯದರ್ಶಿಗಳು ಹಾಗೂ ಸಂಪಾದಕರು

# ನೀವು ತಿಳಿಯಬೇಕಾದ ಬಬ್ಬೂರುಕಮ್ಮೆಗಳು



## ಶ್ರೀ ಆಹಿತಾಗ್ನಿ ಪ್ರದೀಪ ಶರ್ಮ

ಶ್ರೀಯುತ ಆಹಿತಾಗ್ನಿ ಪ್ರದೀಪ ಶರ್ಮರು ಮೂಲತಃ ಭದ್ರಾವತಿ ಪಟ್ಟಣದವರು. ಶ್ರೀ ಪ್ರದೀಪ ಅವರ ಜನನ 1984ನೇ ಇಸವಿಯಲ್ಲಿ ದಂಪತಿಗಳಾದ ತಂದೆ ಶ್ರೀ ನರಹರಿ ಹಾಗೂ ತಾಯಿ ಶ್ರೀಮತಿ ಚಂದ್ರಿಕಾ ಅವರಲ್ಲಿ ಭದ್ರಾವತಿಯಲ್ಲಿ ಜನಿಸಿದರು. ವಿಶ್ವಾಮಿತ್ರ ಗೋತ್ರದವರಾದ ಇವರು ಲೌಕಿಕ ವಿದ್ಯೆಯನ್ನು 2ನೆ ಪಿ.ಯು.ಸಿ ಯವರೆಗೆ ಓದಿರುತ್ತಾರೆ. ಲೌಕಿಕ ವಿದ್ಯೆಯಲ್ಲಿ ಶ್ರೇಯಸ್ಸು ಇಲ್ಲವೆಂದು ಮನಗಂಡು ವೇದಾಧ್ಯಯನ ಮಾಡಬೇಕೆಂದು ಆಸಕ್ತಿ ಬಂದು ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲ್ಲೂಕಿನ ಆಧ್ಯಾತ್ಮ ಪ್ರಕಾಶ ಕಾರ್ಯಾಲಯದಲ್ಲಿ ಕೃಷ್ಣ ಯಜುರ್ವೇದದ ಕಾಲೋಚಿತ ಮಂತ್ರಗಳನ್ನು ಮತ್ತು ಶಂಕರ ಭಾಷ್ಯವನ್ನು ಮೂರು ವರ್ಷಗಳವರೆಗೆ ಅದ್ವಯಾನಂದೇಂದ್ರ ಸರಸ್ವತೀ ಸ್ವಾಮಿಗಳಲ್ಲಿ(ಪೂರ್ವಾಶ್ರಮದಲ್ಲಿ ವೇ.ಬ್ರಂ.ಶ್ರೀ. ಚಂದ್ರಮೌಳಿ ಅವಧಾನಿಗಳಲ್ಲಿ), ನಂತರ ವ್ಯಾಕರಣ– ಧರ್ಮಶಾಸ್ತ್ರ– ವೇದಾಂತ–ಶ್ರೌತ ಹಾಗೂ ಋಗ್ವೇದಾಧ್ಯಯನವನ್ನು ಶಿವಮೊಗ್ಗದ ಸಂಸ್ಕೃತ ಗ್ರಾಮವೆಂದೇ ಪ್ರಸಿದ್ಧವಾಗಿರುವ ಮತ್ತೂರಿನಲ್ಲಿ ಅಕ್ಷರಾನಂದೇಂದ್ರ ಸರಸ್ವತಿ–ಕೇಶವ ಅವಧಾನಿ–ವೆಂಕಟೇಶ ಅವಧಾನಿ ಅವರ ಬಳಿ ಮಾಡಿದರು. ವಿಶೇಷವಾಗಿ ಅಧ್ಯಾತ್ಮ ಪ್ರವಚನವನ್ನು ರಾಜ್ಯದಂತ ಮಾಡಿರುತ್ತಾರೆ.

ಇದರ ಜೊತೆಜೊತೆಯಲ್ಲಿ ಶ್ರೌತದ ಬಗ್ಗೆ ಸಂಶೋಧನೆಯನ್ನು ಮಾಡುತ್ತಿರುತ್ತಾರೆ. ಭಾರತದಲ್ಲಿ ನಡೆಯುವ ಪ್ರತಿಷ್ಠಿತ ಶ್ರೌತ ಸದಸ್ಸುಗಳಲ್ಲಿ (ಗೋಷ್ಠಿಗಳು) ಭಾಗಹಿಸುತ್ತಿರುತ್ತಾರೆ. ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಸಾಮವೇದ ಶ್ರೌತ ಸದಸ್ಸಿನಲ್ಲಿ ಪ್ರಮುಖಪಾತ್ರವನ್ನು ವಹಿಸಿದ್ದರು.

ಇದಲ್ಲದೇ ಸಂಸ್ಕೃತ ಸಾಹಿತ್ಯ ಮತ್ತು ನಾಟಕಗಳನ್ನು ಅಧ್ಯಯನ ಮಾಡಿರುತ್ತಾರೆ. ವೇದಾಂತದಲ್ಲಿ ಪ್ರಸ್ಥಾನತ್ರಯ ಭಾಷ್ಯವನ್ನು ಅಂದರೆ ಭಗವದ್ಗೀತೆ, ದಶೋಪನಿಷತ್ತು ಹಾಗೂ ಬ್ರಹ್ಮ ಸೂತ್ರಭಾಷ್ಯಗಳನ್ನು ವಿಶೇಷವಾಗಿ ಶಂಕರಾಚಾರ್ಯರು ಬರೆದ ಭಾಷ್ಯಾದಿಗಳನ್ನು ಚೆನ್ನಾಗಿ ಅಧ್ಯಯನವನ್ನು ಮಾಡಿರುತ್ತಾರೆ.

ಇವರು ಲಕ್ಷ್ಮೀ ದೇಶಪಾಂಡೆ ಎಂಬ ಸಾಧ್ವೀಮಣಿಯನ್ನು ವರಿಸಿ ಗೃಹಸ್ಥಾಶ್ರಮವನ್ನು ಸ್ವೀಕರಿಸಿದ್ದಾರೆ. ಈ ದಂಪತಿಗಳಿಗೆ ಮೂರು ಹೆಣ್ಣು ಮಕ್ಕಳಿದ್ದಾರೆ.

ವೈದಿಕವಾಗಿ ಕರ್ಮಠರಾಗಿ ಬದುಕುತ್ತಾ ಇರುವ ಶ್ರೀಯುತರು ಚಿಕ್ಕ, ಚೊಕ್ಕ ಮತ್ತು ತೃಪ್ತಿಯಿಂದ ಜೀವನವನ್ನು ನಡೆಸುತ್ತ 2016 ರಲ್ಲಿ ಅಗ್ನ್ಯಾಧಾನ ಮಾಡಿರುತ್ತಾರೆ.

ಸ್ವತಃ ಅಗ್ನಿಹೋತ್ರಗಳಾಗಿ ನಿತ್ಯವಲ್ಲದೇ ಕಾಲಕಾಲಕ್ಕೆ ಅಂದರೆ ಪ್ರತೀ ಪೌರ್ಣಿಮಿಯಂದು ಪೌರ್ಣಮಾಸೇಷ್ಟಿ ಮತ್ತು ಪ್ರತೀ ಅಮವಾಸ್ಯೆಯಂದು ದರ್ಶೇಷ್ಟಿಯನ್ನು ಮಾಡುತ್ತಿರುತ್ತಾರೆ. ಇಡೀ ಕರ್ನಾಟಕದಲ್ಲಿ ಅಗ್ನಿಹೋತ್ರವನ್ನು ನಡೆಸಿಕೊಂಡು ಬರುತ್ತಿರುವ ಕೇವಲ ಹನ್ನೆರಡು ಜನರಲ್ಲಿ ಶ್ರೀಯುತರು ಒಬ್ಬರು. ಬಬ್ಬೂರುಕಮ್ಮೆ ಜನಾಂಗದಲ್ಲಿರುವ ಕೇವಲ ಇಬ್ಬರು ಅಗ್ನಿಹೋತ್ರಿಗಳಲ್ಲಿ ಇವರು ಒಬ್ಬರು.

ವಿಶೇಷವಾಗಿ ಧಾರವಾಡ ಜಿಲ್ಲೆಯ ಹೆಬ್ಬಳಿ ಕ್ಷೇತ್ರದ ಅವಧೂತರಾದ ಪರಮ ಪೂಜ್ಯ ಶ್ರೀ ಶ್ರೀ

ದತ್ತಾವಧೂತ ಗುರುಗಳಿಂದ ರಾಮತಾರಕ ಮಂತ್ರದ ಅನುಗ್ರಹವನ್ನು ಪಡೆದಿರುತ್ತಾರೆ. ಅವರನ್ನೇ ಸದ್ಗುರುಗಳಾಗಿ ಸ್ವೀಕರಿಸಿದ್ದಾರೆ.

ಬಹುಮುಖ ಪ್ರತಿಭೆಗಳಿಂದ ಕೂಡಿದ ಶ್ರೀಯುತರು ಸಜ್ಜನರು, ಸದ್ಗೃಹಸ್ಥರೂ ಸತ್ಪ್ರಜೆಗಳೂ, ಬಹಳ ವಿದ್ಯಾವಂತರಾಗಿದ್ದರೂ ಎಲೆ ಮರೆಯ ಕಾಯಿಯಂತೆ ಇದ್ದು ವಿನಯ ಮತ್ತು ಸ್ನೇಹದ ಗುಣಗಳಿಂದ ಸಮಾಜದಲ್ಲಿ ಎಲ್ಲರಿಗೂ ಬೇಕಾದವರಾಗಿದ್ದಾರೆ.

ಇವರು ಬ್ರಾಹ್ಮಣ ಸಮಾಜದಲ್ಲಿ ಒಬ್ಬ ಅನರ್ಘ್ಯ ರತ್ನ ಎಂದರೆ ಉತ್ಪ್ರೇಕ್ಷೆ ಆಗಲಾರದು. ನಮ್ಮ ಬಬ್ಬೂರುಕಮ್ಮೆ ಜನಾಂಗದ ಹೆಮ್ಮೆ.

ಇಂತಹ ವ್ಯಕ್ತಿಗಳು ನಮ್ಮ ಬಬ್ಬೂರುಕಮ್ಮೆ ಜನಾಂಗದಲ್ಲೂ ಮತ್ತು ಸಮಷ್ಟೀ ಬ್ರಾಹ್ಮಣ ಸಮುದಾಯದಲ್ಲಿ ಬಹಳ ಸಂಖ್ಯೆಯಲ್ಲಿ ಹೆಚ್ಚಲಿ ಹಾಗೂ ಕಡಿಮೆಯಾಗುತ್ತಿರುವ ಸನಾತನ ಧರ್ಮದಲ್ಲಿನ ಆಸಕ್ತಿಯು ಎಲ್ಲಾ ಬ್ರಾಹ್ಮಣರಲ್ಲೂ ಬಂದು ಶ್ರೇಯೋ ಮಾರ್ಗದಲ್ಲಿ ನಡೆಯಲಿ ಎಂದು ಬಬ್ಬೂರುಕಮ್ಮೆ ಸೇವಾ ಸಮಿತಿಯು ಹೃತ್ಪೂರ್ವಕವಾಗಿ ಆಶಿಸುತ್ತಾ ಶ್ರೀ ಆಹಿತಾಗ್ನಿ ಪ್ರದೀಪ ಶರ್ಮರನ್ನು ಬಬ್ಬೂರುಕಮ್ಮೆ ಬಳಗಕ್ಕೆ ಪರಿಚಯಿಸಲು ಹೆಮ್ಮೆ ಪಡುತ್ತದೆ.

ಶ್ರೀಯುತರಿಗೆ ವಿಶ್ವವಿಪ್ರತ್ರಯೀ ಪರಿಷತ್, ಬೆಂಗಳೂರು ಇವರು ಪ್ರಾಯೋಜಿಸಿರುವ ವಾರ್ಷಿಕ ಶಂಕರ ಪುರಸ್ಕಾರವನ್ನು ಶ್ರೀ ಶಂಕರ ಜಯಂತಿಯ ಈ ಶುಭ ದಿನದಂದು ಪ್ರದಾನ ಮಾಡಲು ಬಬ್ಬೂರು ಕಮ್ಮೆ ಸೇವಾ ಸಮಿತಿ, ಬೆಂಗಳೂರು ಇವರು ಹರ್ಷಿಸುತ್ತಾರೆ.

---

## ಬಬ್ಬೂರುಕಮ್ಮೆ ವೆಬ್‌ಸೈಟ್

**ಬಬ್ಬೂರುಕಮ್ಮೆ ವೆಬ್‌ಸೈಟ್ ಅನ್ನು ಸಿದ್ದಪಡಿಸಿ ಸದಸ್ಯರ ಉಪಯೋಗಕ್ಕಾಗಿ ಬಿಟ್ಟಿರುವುದು ಈಗಾಗಲೇ ತಮಗೆಲ್ಲಾ ತಿಳಿದಿರುವ ವಿಷಯ. ಇದನ್ನು ಉತ್ತಮಗೊಳಿಸಲು ಸಲಹೆ ಸೂಚನೆಗಳು ಇದ್ದರೆ ಸದಸ್ಯರುಗಳು ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ಜಿ.ವಿ.ರಮೇಶ್ ಅವರಿಗೆ ನೀಡಬಹುದು. ಅವರ ಮೊಬೈಲ್ ಸಂಖ್ಯೆ : 9243418200**

**ನಮ್ಮ ವೆಬ್‌ಸೈಟ್ ವಿಳಾಸ : www.babboorkamme.org**

# ನೀವು ತಿಳಿಯಬೇಕಾದ ಬಬ್ಬೂರುಕಮ್ಮೆಗಳು



## ವೇದ ಬ್ರಹ್ಮ ಶ್ರೀ ಗಿರೀಶ್ ಜೊಯಿಸ್

ವೇದ ಬ್ರಹ್ಮ ಶ್ರೀ ಗಿರೀಶ್ ಜೊಯಿಸ್ ಅವರು, ಬಬ್ಬೂರು ಕಮ್ಮೆ ಸಮುದಾಯದ ಕಾಶ್ಯಪ ಗೋತ್ರಕ್ಕೆ ಸೇರದವರಾಗಿದ್ದಾರೆ. ಇವರ ತಂದೆ, ಹೊಳೆನರಸೀಪುರ ತಾಲೂಕು ಜೋಡಿ ಗುಬ್ಬಿ ಗ್ರಾಮದ ಶ್ರೀ. ಜಿ.ಡಿ. ಮಂಜಯ್ಯನವರು, ತಾಯಿ ಶ್ರೀಮತಿ. ಛಾಯಮ್ಮನವರು.

ಶ್ರೀ ಗಿರೀಶ್ ಅವರು ತಮ್ಮ ಪ್ರಾಥಮಿಕ ಮತ್ತು ಪ್ರೌಢ ವಿದ್ಯಾಭ್ಯಾಸವನ್ನು ಜೋಡಿ ಗುಬ್ಬಿ ಗ್ರಾಮದಲ್ಲಿ ಮುಗಿಸಿ, ಆನಂತರ ಬೆಂಗಳೂರಿನ ಪ್ರಖ್ಯಾತ ಪುರೋಹಿತರೂ, ವೇದಾಧ್ಯಯನ ಸಂಪನ್ನರೂ ಆದ, ವೇದ ಬ್ರಹ್ಮ ಶ್ರೀ ಮಳಲಿ ರಾಮ ಭಟ್ಟರಲ್ಲಿ ಮತ್ತು ಅವರ ಪುತ್ರರಾದ ವೇದ ಬ್ರಹ್ಮ ಶ್ರೀ ಶೇಷಾಚಲಭಟ್ಟ ಅವರಲ್ಲಿ ವೇದ ಮತ್ತು ಆಗಮ ಶಾಸ್ತ್ರಗಳ ಅಧ್ಯಯನ ಮಾಡಿ, ವೈದಿಕ ವೃತ್ತಿಗಳಲ್ಲಿ ಅನುಭವಗಳಿಸಿಕೊಂಡರು.

ಅನಂತರ ಇವರು, ಬೆಂಗಳೂರಿನ ಶ್ರೀ ಕೈಲಾಸ ಆಶ್ರಮದ ಶ್ರೀ. ರಾಜರಾಜೇಶ್ವರಿ ವೇದಾಗಮ ಮಹಾಪಾಠ ಶಾಲೆಯಲ್ಲಿ ಅಧ್ಯಯನ ಮಾಡಿ ಕರ್ನಾಟಕ ಸರ್ಕಾರವು ನಡೆಸುವ ಶೈವಾಗಮ ಪ್ರವರ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ.

ಕಳೆದ 27 ವರ್ಷಗಳಿಂದ ವೈದಿಕ ವೃತ್ತಿಯನ್ನು ಕೈಗೊಂಡು ಪೂರ್ವ ಮತ್ತು ಅಪರ ಕರ್ಮಗಳನ್ನು ಮಾಡಿಸುತ್ತಾ ಅದರಲ್ಲಿ ಅಪಾರ ಅನುಭವವನ್ನು ಗಳಿಸಿರುತ್ತಾರೆ. ಷೋಡಶ ಕರ್ಮಗಳನ್ನು ಶಾಸ್ತ್ರೋಕ್ತವಾಗಿ ನಡೆಸುತ್ತಾ, ಆಸ್ತಿಕ ಜನತೆಗೆ ಉಪಯುಕ್ತ ವ್ಯಕ್ತಿಯಾಗಿ ಸಮಾಜದಲ್ಲಿ ಗುರುತಿಸಿಕೊಂಡಿದ್ದಾರೆ.

ಕರ್ನಾಟಕದ ವಿವಿಧ ಪ್ರದೇಶಗಳಲ್ಲೇ ಅಲ್ಲದೆ ದೆಹಲಿ ಮುಂತಾದ ಪ್ರದೇಶಗಳಲ್ಲಿ ಸಹ ಯಜ್ಞ-ಯಾಗ-ಹೋಮ ಹವನಗಳನ್ನು ನಿರ್ವಹಿಸುತ್ತಾ ಪ್ರಖ್ಯಾತರಾಗಿದ್ದಾರೆ. ಅಲ್ಲದೇ ಇವರು ಜ್ಯೋತಿಷ್ಯ ಶಾಸ್ತ್ರವನ್ನು ಅಧ್ಯಯನ ಮಾಡಿ, ಜನತೆಗೆ ಅದರ ಪ್ರಯೋಜನವನ್ನು ನೀಡುತ್ತಿದ್ದಾರೆ.

ಉಚ್ಚಾರ ಸ್ಪಷ್ಟವಿಲ್ಲದೆ ಮಾತಿನ ಸಮಸ್ಯೆ ಇರುವ ಅನೇಕ ಮಕ್ಕಳಿಗೆ ವೇದಾಧ್ಯಯನ ಮಾಡಿಸಿ ಅವರ ಸಮಸ್ಯೆಗಳನ್ನು ಪರಿಹರಿಸಿದ್ದಾರೆ. ದೇವಾಲಯ ನಿರ್ಮಾಣ, ಅನಾಥ ಮಕ್ಕಳಿಗೆ ಶಿಕ್ಷಣ ವ್ಯವಸ್ಥೆ ಮುಂತಾದ ಅನೇಕ ಸಾಮಾಜಿಕ ಕಾರ್ಯಗಳನ್ನು ಮಾಡುತ್ತಾ ಜನಾನುರಾಗಿ ಪುರೋಹಿತರೆಂದು ಖ್ಯಾತರಾಗಿರುವ, ವೇದ ಬ್ರಹ್ಮಶ್ರೀ ಗಿರೀಶ್ ಜೋಯಿಸ್ ಇವರಿಗೆ ವಿಶ್ವವಿಪ್ರತ್ರಯೀ ಪರಿಷತ್, ಬೆಂಗಳೂರು ಇವರು ಪ್ರಾಯೋಜಿಸಿರುವ ವಾರ್ಷಿಕ ಶಂಕರ ಪುರಸ್ಕಾರವನ್ನು ಶ್ರೀ ಶಂಕರ ಜಯಂತಿಯ ಈ ಶುಭ ದಿನದಂದು ಪ್ರದಾನ ಮಾಡಲು ಬಬ್ಬೂರು ಕಮ್ಮೆ ಸೇವಾ ಸಮಿತಿ, ಬೆಂಗಳೂರು ಇವರು ಹರ್ಷಿಸುತ್ತಾರೆ.

# ದಿನಾಂಕ 29-12-2024 ರ ಬಳಗಕೂಟದ ಸಂಕ್ಷಿಪ್ತ ವರದಿ

ಬೆಂಗಳೂರಿನ ಬಬ್ಬೂರುಕಮ್ಮೆ ಸೇವಾಸಮಿತಿಯು ಏರ್ಪಡಿಸಿದ್ದ ಬಳಗಕೂಟ-2024 ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಶ್ರೀ ಶೃಂಗೇರಿ ಶಂಕರಮಠ ಹಾಸನ ಶಾಖೆಯ ಧರ್ಮದರ್ಶಿಗಳಾದ ಶ್ರೀ ಎಂ.ಎಸ್. ಶ್ರೀಕಂಠಯ್ಯ ಅವರು ಭಾಗವಹಿಸಿ, ಇಡೀ ದಿನ ನಮ್ಮ ಬಬ್ಬೂರುಕಮ್ಮೆ ಬಾಂಧವರೊಡನೆ ಸಕ್ರಿಯವಾಗಿದ್ದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು ಬೆಂಗಳೂರಿನ ಬಬ್ಬೂರುಕಮ್ಮೆ ಸೇವಾ ಸಮಿತಿಯು ಇತರೆ ಎಲ್ಲಾ ಸಂಸ್ಥೆಗಳಿಗಿಂತಲೂ ಮುಂದಿದ್ದು ಸಾವಿರಾರು ವಿದ್ಯಾರ್ಥಿಗಳಿಗೆ ಒಂದಲ್ಲಾ ಒಂದು ರೀತಿ ಸಹಾಯ ಮಾಡುತ್ತಾ ಬಂದಿದೆ. ಈ ಸಮಿತಿಯ ಕಾರ್ಯಗಳನ್ನು ಶ್ಲಾಘಿಸಿ ಮುಂದೆಯೂ ಇನ್ನೂ ಹೆಚ್ಚು ಸೇವೆಯನ್ನು ಮಾಡಲು ಭಗವಂತನು ಸಮಿತಿಯ ಕಾರ್ಯಕಾರಿ ಮಂಡಳಿ ಸದಸ್ಯರೆಲ್ಲರಿಗೂ ಆಶೀರ್ವದಿಸಲಿ ಎಂದು ಹರಸಿದರು. ಇದೇ ಸಂದರ್ಭದಲ್ಲಿ 90 ವರ್ಷ ಹಾಗೂ ಮೇಲ್ಪಟ್ಟ ಹಿರಿಯರಿಗೆ ಮತ್ತು 50 ವರ್ಷ ದಾಂಪತ್ಯ ಜೀವನ ನಡೆಸಿದ ದಂಪತಿಗಳಿಗೆ ಮತ್ತು ನವ ವಿವಾಹಿತ ದಂಪತಿಗಳನ್ನು ಸನ್ಮಾನಿಸಿ ಆನಂದ ಪಟ್ಟರು.

2024 ರ ಬಿ.ಎಂ.ಶ್ರೀ ಪ್ರಶಸ್ತಿಯನ್ನು ಸ್ವೀಕರಿಸಿದ ಡಾ. ಗುರುರಾಜ ವಿ ಕರಜಗಿ ಯವರು ಮಾತನಾಡುತ್ತಾ ಈ ಪ್ರಶಸ್ತಿಯನ್ನು ಎಲ್ಲಾ ಪ್ರಶಸ್ತಿಗಳಿಗಿಂತ ಅತ್ಯಂತ ಹೆಮ್ಮೆ ಹಾಗೂ ಆದರದಿಂದ ಸ್ವೀಕರಿಸುತ್ತಿದ್ದೇನೆ. ಕರುಣಾಳು ಬಾ ಬೆಳಕೆ ಶೀರ್ಷಿಕೆಯಡಿ ಸಾವಿರಾರು ಕಂತುಗಳಲ್ಲಿ ಲೇಖನಗಳನ್ನು ಪ್ರಸ್ತುತ ಪಡಿಸಿದ್ದೇನೆ ಹಾಗೂ ಅದೇ ಹೆಸರಿನಲ್ಲಿ ಸುಮಾರು 15 ಪುಸ್ತಕಗಳು ಪ್ರಕಟಗೊಂಡಿವೆ. ಇದಕ್ಕೆಲ್ಲಾ ಬಿ.ಎಂ.ಶ್ರೀ. ಅವರ ಆಶೀರ್ವಾದವೇ ಕಾರಣ, ಅವರ ಹೆಸರಿನ ಈ ಪ್ರಶಸ್ತಿಯು ನನಗೆ ದೊರೆತಿರುವುದು ಹೆಮ್ಮೆ ಎನಿಸುತ್ತದೆ. ಎಂದು ತಿಳಿಸಿ ಆಚಾರ್ಯ ಬಿ.ಎಂ.ಶ್ರೀ ಅವರ ಸಾಹಿತ್ಯದ ಬಗ್ಗೆ ಅನೇಕ ಸ್ವಾರಸ್ಯಕರ ವಿಚಾರಗಳನ್ನು ತಿಳಿಸಿದರು.

ಸಮಿತಿಯ ಅಧ್ಯಕ್ಷರಾದ ಡಾ. ಎ.ವಿ.ಪ್ರಸನ್ನ ಅವರು ಇದೇ ಸಂದರ್ಭದಲ್ಲಿ ಮಾತನಾಡಿ ಬಿ.ಎಂ.ಶ್ರೀ. ಅವರ ಕಾರಿಹೆಗ್ಗಡೆಯ ಮಗಳು ಕವನವನ್ನು ಹೇಳಿ ಯಾವರೀತಿ ಬಿ.ಎಂ.ಶ್ರೀ. ಅವರ ಕನ್ನಡ ಗೀತೆಗಳು ಎಲ್ಲರ ಮೇಲೆ ಪ್ರಭಾವ ಬೀರಿದೆ ಎಂದು ವಿವರಿಸಿದರು.

ಸಮಿತಿಯ ಅಧ್ಯಕ್ಷರಾದ ಡಾ. ಎ.ವಿ.ಪ್ರಸನ್ನ ಅವರು ಅಧ್ಯಕ್ಷತೆ ವಹಿಸಿದ್ದರು ಹಾಗೂ ಎಲ್ಲರನ್ನೂ ಸ್ವಾಗತಿಸಿದರು. ಸಮಿತಿಯ ಗೌರವ ಕಾರ್ಯದರ್ಶಿಗಳಾದ ಡಾ ಎನ್. ಸತ್ಯಪ್ರಕಾಶ್‌ರವರು ಸಂಕ್ಷಿಪ್ತ ವರದಿಯನ್ನು ನೀಡಿದರು. ಮಧ್ಯಾಹ್ನ ಭೋಜನದ ನಂತರ ಸಮಿತಿಯ ಸದಸ್ಯರುಗಳಿಂದ ಮನೋರಂಜನಾ ಕಾರ್ಯಕ್ರಮಗಳನ್ನು ನಡೆಸಲಾಯಿತು. ಕುಮಾರಿ ಕೆ.ಎಸ್.ಪ್ರತಿಭಾ ಹಾಗೂ ಕುಮಾರಿ ಸೌಪರ್ಣಿಕಾ ನಾಡಿಗ್ ಅವರು ತಮ್ಮ ಭರತನಾಟ್ಯದ ಮೂಲಕ ಎಲ್ಲರನ್ನು ರಂಜಿಸಿದರು. ಉತ್ತರ ಹಾಗೂ ದಕ್ಷಿಣ ಶಾಖೆಯವರು ಮನೋರಂಜನಾ ಕಾರ್ಯಕ್ರಮವನ್ನು ನೀಡಿ ಎಲ್ಲರನ್ನು ಸಂತೋಷಪಡಿಸಿದರು.



ಮುಖ್ಯ ಅತಿಥಿಗಳೊಂದಿಗೆ ಕಾರ್ಯಕಾರಿ ಸಮಿತಿಯ ಸದಸ್ಯರು

# ಬಳಗಕೂಟ ಕಾರ್ಯಕ್ರಮದ ಕೆಲವು ಚಿತ್ರಗಳು




ದೀಪವನ್ನು ಪ್ರಜ್ವಲಿಸಿ ಕಾರ್ಯಕ್ರಮವನ್ನು ಉದ್ಘಾಟಿಸುತ್ತಿರುವುದು




2024ನೇ ಸಾಲಿನ ಬಿ.ಎಂ.ಶ್ರೀ ಪ್ರಶಸ್ತಿಯನ್ನು ಅಧ್ಯಕ್ಷರು ನೀಡಿ ಪುರಸ್ಕರಿಸುತ್ತಿರುವುದು



ಬಿ.ಎಂ.ಶ್ರೀ ಪ್ರಶಸ್ತಿಯನ್ನು ಸ್ವೀಕರಿಸಿದ ಡಾ. ಗುರುರಾಜ ವಿ ಕರಜಗಿ ಅವರು ಮಾತನಾಡುತ್ತಿರುವುದು



ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶ್ರೀ ಎಂ.ಎಸ್. ಶ್ರೀಕಂಠಯ್ಯ ದಂಪತಿಗಳನ್ನು ಸನ್ಮಾನಿಸಿದ ಕ್ಷಣ




ವಿಶೇಷ ಅತಿಥಿಗಳಾಗಿ ಆಗಮಿಸಿದ್ದ ವಿದುಷಿ ಶ್ರೀಮತಿ ಎಂ.ಎಸ್. ಶೀಲಾ ಅವರನ್ನು ಸನ್ಮಾನಿಸಿದ ಕ್ಷಣ




೯೦ ವಸಂತಗಳನ್ನು ಪೂರೈಸಿದ ಹಿರಿಯರಿಗೆ ಸನ್ಮಾನಿಸಿದ ಸಂದರ್ಭ




ಶ್ರೀಮತಿ ಮತ್ತು ಶ್ರೀ ಪಿ.ಕೃಷ್ಣಭಟ್ ದಂಪತಿಗಳು ಸೇರಿ
ವೈವಾಹಿಕ ಜೀವನದ 50 ವಸಂತಗಳನ್ನು ಪೂರೈಸಿದ ದಂಪತಿಗಳಿಗೆ ಸನ್ಮಾನಿಸಿದ ಸಂದರ್ಭ



ವೈವಾಹಿಕ ಜೀವನದ 50 ವಸಂತಗಳನ್ನು ಪೂರೈಸಿದ ದಂಪತಿಗಳಿಗೆ ಸನ್ಮಾನಿಸಿದ ಸಂದರ್ಭ



ವೈವಾಹಿಕ ಜೀವನದ 50 ವಸಂತಗಳನ್ನು ಪೂರೈಸಿದ ದಂಪತಿಗಳಿಗೆ ಸನ್ಮಾನಿಸಿದ ಸಂದರ್ಭ







2024ನೇ ಸಾಲಿನ ಸಾಧಕ ರತ್ನ ಪ್ರಶಸ್ತಿ ಸ್ವೀಕರಿಸಿದ ಸಾಧಕರುಗಳು



ಶ್ರೀಮತಿ ಮತ್ತು ಶ್ರೀ ಬಿ.ಕೆ. ಪ್ರಭಾಕರ್, ಸಮಿತಿಯ ಉಪಾಧ್ಯಕ್ಷರು,
ವೈವಾಹಿಕ ಜೀವನದ 50 ವಸಂತಗಳನ್ನು ಪೂರೈಸಿದ ದಂಪತಿಗಳಿಗೆ ಸನ್ಮಾನಿಸಿದ ಸಂದರ್ಭ




ವೈವಾಹಿಕ ಜೀವನದ ನವ ದಂಪತಿಗಳಿಗೆ ಸನ್ಮಾನಿಸಿದ ಸಂದರ್ಭ





ಕುಮಾರಿ ಕೆ.ಎಸ್. ಪ್ರತಿಭಾ ಹಾಗೂ ಕುಮಾರಿ ಸೌಪರ್ಣಿಕಾ ನಾಡಿಗ್ ರವರಿಂದ ಭರತನಾಟ್ಯ





ಮಹಿಳಾ ವಿಭಾಗದವರಿಂದ ಮನೋರಂಜನಾ ಕಾರ್ಯಕ್ರಮಗಳು








# 2024ನೇ ಸಾಲಿನ ಪ್ರತಿಭಾ ಪುರಸ್ಕಾರ










# 2024ನೇ ಸಾಲಿನ ಪ್ರತಿಭಾ ಪುರಸ್ಕಾರ









ಚಿಕ್ಕವಯಸ್ಸಿನ ಸಾಧಕನಿಗೆ ಪ್ರೋತ್ಸಾಹ



ಬಳಗ ಕೂಟ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರ್ವಾಹಣೆ ಮಾಡಿದ
ಕು. ಸುಪ್ರಿತ ಮತ್ತು ಶ್ರೀಮತಿ ಸುಮನ ಅವರಿಗೆ ಕಿರುಕಾಣಿಕೆ ನೀಡಿದ ಸಂದರ್ಭ

ಬಬ್ಬೂರುಕಮ್ಮೆ ಸೇವಾ ಸಮಿತಿ (ರಿ.)

# ಮಹಿಳಾ ವಿಭಾಗ – ಉತ್ತರ ಶಾಖೆ

## ಚಟುವಟಿಕೆಗಳ ವರದಿ



**ನವೆಂಬರ್:** ಈ ತಿಂಗಳು 'ಕನ್ನಡ ರಾಜ್ಯೋತ್ಸವ'ವನ್ನು ಸಂಭ್ರಮದಿಂದ ಆಚರಿಸಲಾಯಿತು. ತಾಯಿ ಭುವನೇಶ್ವರಿಗೆ ಪೂಜೆ, ಮಂಗಳಾರತಿ ಮಾಡಿ ಪ್ರಸಾದ ಹಂಚಲಾಯಿತು. ಕರ್ನಾಟಕದ ಬಗ್ಗೆ ರಸಪ್ರಶ್ನೆಯನ್ನು ಕೇಳಿ ಕನ್ನಡ ಗೀತೆಗಳನ್ನು ಹಾಡಲಾಯಿತು. ಶ್ರೀಮತಿ ಉಮಾ ರವರು ಗಾದೆಗಳನ್ನು ಪೂರ್ಣಗೊಳಿಸುವ ಆಟವನ್ನು ಆಡಿಸಿದರು.

**ಡಿಸೆಂಬರ್:** ಈ ತಿಂಗಳು ಶ್ರೀಮತಿ ನಾಗರತ್ನ ಮತ್ತು ಶ್ರೀಮತಿ ಲಕ್ಷ್ಮಿ ಸತೀಶ್ ರವರು ಕಾರ್ಯಕ್ರಮವನ್ನು ನಡೆಸಿಕೊಟ್ಟರು. 'A to Z coins' ಜೋಡಿಸುವ ಆಟ, ಸಾಮಾನ್ಯ ಜ್ಞಾನದ ಪ್ರಶ್ನೆಗಳನ್ನು ಕೇಳಿ ವಿಜೇತರಗೆ ಬಹುಮಾನ ನೀಡಲಾಯಿತು.

ಈ ತಿಂಗಳು ನಮ್ಮ ಸಂಘದ ಬಳಗಕೂಟವು ಬಹಳ ವಿಜೃಂಭಣೆಯಿಂದ ನೆರವೇರಿತು. ಸಂಘದ ವತಿಯಿಂದ ಆಡಿಸಿದ ಆಟಗಳಲ್ಲಿ ನಮ್ಮ ಸದಸ್ಯೆಯರು ಭಾಗವಹಿಸಿ ಬಹುಮಾನಗಳನ್ನು ಪಡೆದಿದ್ದಾರೆ. ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ "ಅಷ್ಟಲಕ್ಷ್ಮಿ"ಯರ ಸಂಗೀತ ರೂಪಕವನ್ನು ನಮ್ಮ ಸದಸ್ಯೆಯರು ಪ್ರಸ್ತುತಪಡಿಸಿ ಎಲ್ಲರಿಂದ ಪ್ರಶಂಸೆಯನ್ನು ಗಳಿಸಿದರು.

**ಜನವರಿ:** ಈ ತಿಂಗಳು ಶ್ರೀಮತಿ ವಿಜಯಲಕ್ಷ್ಮಿ ಮತ್ತು ಶ್ರೀಮತಿ ಶಶಿಕಲ ರವರು ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಹೊಸ ವರ್ಷದ ಶುಭಾಶಯಗಳ ವಿನಿಮಯ ಮಾಡಿಕೊಂಡು ಸಂಭ್ರಮದಿಂದ ಆಚರಿಸಲಾಯಿತು. ಪದಬಂಧದ ಪ್ರಶ್ನೆ ಪತ್ರಿಕೆ ಹಾಗೂ ಕನ್ನಡ ರಸಪ್ರಶ್ನೆಯನ್ನು ಕೇಳಲಾಯಿತು.

ವಿಜೇತರಿಗೆ ಬಹುಮಾನ ನೀಡಲಾಯಿತು. ಸಂಕ್ರಾಂತಿ ಹಬ್ಬದ ಸಲುವಾಗಿ ಎಳ್ಳು ಬೆಲ್ಲ ಹಂಚಿ, ಸಂಕ್ರಾಂತಿ ಹಬ್ಬದ ಹಾಡುಗಳನ್ನು ಹಾಡಿ ಸಂಭ್ರಮಿಸಿದರು.

**ಫೆಬ್ರುವರಿ:** ಈ ತಿಂಗಳು ಶ್ರೀಮತಿ ನಾಗರತ್ನ, ಶ್ರೀಮತಿ ಶೈಲಜ ಮತ್ತು ಶ್ರೀಮತಿ ಗಾಯತ್ರಿ ರವರು ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಎಲ್ಲರು "ಲಲಿತಾ ಸಹಸ್ರನಾಮ" ಪಾರಾಯಣ ಮಾಡಿ ಹಾಗು ದೇವಿ ಹಾಡುಗಳನ್ನು ಹಾಡಲಾಯಿತು. ಶಿವರಾತ್ರಿ ಪ್ರಯುಕ್ತ ಶಿವನ ಹಾಡುಗಳನ್ನು ಹೇಳಿದರು. ಶಿವರಾತ್ರಿಯ ಮಹಾತ್ಮೆಯ ಬಗ್ಗೆ ವಿಚಾರ ಸಂಕೀರ್ಣ ನಡೆಸಿದರು.

**ಮಾರ್ಚ್:** ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಯುಕ್ತ ನಮ್ಮ ಉತ್ತರ ಶಾಖೆಯ ಸದಸ್ಯೆಯರು ದಕ್ಷಿಣ ಶಾಖೆಯ ಸದಸ್ಯೆಯರನ್ನು ಆಹ್ವಾನಿಸಿದ್ದೆವು. ಕಾರ್ಯಕ್ರಮವು ತುಂಬ ಅಚ್ಚುಕಟ್ಟಾಗಿ ಮೂಡಿ ಬಂತು. ಎಲ್ಲರೂ ಸಂಭ್ರಮದಿಂದ ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ನಮ್ಮ ಸದಸ್ಯೆಯರು ಭಾಗವಹಿಸಿ, ಆಟ, ಮನರಂಜನೆ, ಸಮೂಹ ಗಾನ, ಫ್ಯಾಶನ್ ಶೋ, ರಸಪ್ರಶ್ನೆ ಕಾರ್ಯಕ್ರಮ ಹೀಗೆ ನಾನಾ ಭಗೆಗಳಲ್ಲಿ ದಕ್ಷಿಣ ಶಾಖೆಯ ಸದಸ್ಯೆಯರಿಗೆ ಮನರಂಜನೆಯನ್ನು ನೀಡಿದರು. ಶ್ರೀಮತಿ ಶಾಂತ ನಾಗರಾಜ ರವರು ಹತ್ತು ಪ್ರಶ್ನೆಗಳನ್ನು ಕೇಳಿ ಆದಕ್ಕೆ ಅವರೇ ಬರೆದ ಪುಸ್ತಕಗಳನ್ನು ಬಹುಮಾನವಾಗಿ ನೀಡಿದರು. ಇದು ಎಲ್ಲರಿಗೂ ತುಂಬ ಸಂತೋಷವನ್ನು ಉಂಟುಮಾಡಿತು.




**ಶಶಿಕಲಾ ರವೀಂದ್ರ**
ಸಂಚಾಲಕಿ

## ಬಬ್ಬೂರುಕಮ್ಮೆ ಸೇವಾ ಸಮಿತಿ (ರಿ.)

# ಮಹಿಳಾ ವಿಭಾಗ-ದಕ್ಷಿಣ ಶಾಖೆ

## ಚಟುವಟಿಕೆಗಳ ವರದಿ



ನವೆಂಬರ್ ತಿಂಗಳ ಮೊದಲನೆಯ ಸಭೆಯಲ್ಲಿ ರಾಜ್ಯೋತ್ಸವದ ಅಂಗವಾಗಿ ಕನ್ನಡ ದೇಶ ಭಕ್ತಿ ಗೀತೆಗಳನ್ನು ಹಾಡಲಾಯಿತು. ಕನ್ನಡದ ಪದ ಬಂದ ಮತ್ತು ಕರ್ನಾಟಕದ ಬಗ್ಗೆ ರಸ ಪ್ರಶ್ನೆ ಕಾರ್ಯಕ್ರಮವನ್ನು ನಡೆಸಲಾಯಿತು.

ನವೆಂಬರ್ ಎರಡನೇ ಸಭೆಯಲ್ಲಿ ನಾವು ದಕ್ಷಿಣ ಶಾಖೆಯ ಮಹಿಳೆಯರು ಉತ್ತರ ಶಾಖೆಯ ಮಹಿಳೆಯರನ್ನು ಆಹ್ವಾನಿಸಿದ್ದೆವು. ಈ ಕಾರ್ಯಕ್ರಮ "ಮಿಲನ" ತುಂಬಾ ಸುಂದರವಾಗಿ ಮೂಡಿಬಂದಿತು. ಎರಡೂ ಶಾಖೆಗಳ ಮಹಿಳೆಯರು ಕಾರ್ಯಕ್ರಮವನ್ನು ತುಂಬಾ ಆನಂದಿಸಿದರು. ಸ್ವಾಗತ ಭಾಷಣ, ಸ್ವಾಗತ ಗೀತೆ, ರಸ ಪ್ರಶ್ನೆ, ಪದ ಬಂದ, ಕಿರು ನಾಟಕ, ಹಾಸ್ಯ

ಕಲಾವಿದ ವೈ.ವಿ ಗುಂಡೂರಾವ್ ರವರಿಂದ ಹಾಸ್ಯ ಕಾರ್ಯಕ್ರಮ, ಭೋಜನ, ಕಾಫಿ ಮುಂತಾದ ಕಾರ್ಯಕ್ರಮ ಒಳಗೊಂಡಿತ್ತು. ಎರಡು ವಿಭಾಗದ "ಮಿಲನ" ಸ್ಮರಣೀಯವಾಗಿತ್ತು.

ಡಿಸೆಂಬರ್ ತಿಂಗಳ ಮೊದಲ ಸಭೆಯಲ್ಲಿ ಒಂದು ನಿಮಿಷದ ಆಟ ಮತ್ತು ಶ್ರೀಮತಿ ವಿಶಾಲಾಕ್ಷಿ ಅವರು ಸುಬ್ರಹ್ಮಣ್ಯ ಷಷ್ಠಿಯ ಬಗ್ಗೆ ಸಂಕ್ಷಿಪ್ತ ವಿವರಣೆಯನ್ನು ನೀಡಿದರು.

ಡಿಸೆಂಬರ್ ತಿಂಗಳ ಎರಡನೇ ಸಭೆಯಲ್ಲಿ "ಗೀತಾ ಜಯಂತಿ"ಯನ್ನು ಆಚರಿಸಲಾಯಿತು. ಭಗವದ್ಗೀತೆಯ ಕುರಿತು ಪ್ರವಚನ ಮತ್ತು ಭಗವದ್ಗೀತೆಯೆನ್ನು ಕುರಿತು ಹಾಡುಗಳನ್ನು ಹಾಡಲಾಯಿತು.

ಡಿಸೆಂಬರ್ ತಿಂಗಳಲ್ಲಿ ನಾವು ದಕ್ಷಿಣ ಭಾಗದವರು ತುರುವೇಕೆರೆ ಮತ್ತು ಸುತ್ತಮುತ್ತಲಿನ ಪ್ರೇಕ್ಷಣೀಯ ಸ್ಥಳಗಳನ್ನು ವೀಕ್ಷಿಸಲು ಹೋಗಿದ್ದೆವು.

ಜನವರಿಯ ಮೊದಲ ಸಭೆಯಲ್ಲಿ ಫ್ಯಾಷನ್ ಶೋ ಆಯೋಜಿಸಲಾಗಿತ್ತು.. ಕಣ್ಣಿಗೆ ಬಟ್ಟೆ ಕಟ್ಟಿ ಕೊಂಡು ವಸ್ತುಗಳನ್ನು ಗುರುತಿಸುವ ಆಟವನ್ನು ಸಹ ಆಡಲಾಯಿತು.

ಜನವರಿಯ ಎರಡನೇ ಸಭೆಯಲ್ಲಿ 'ಸಂಕ್ರಾಂತಿ ಸಡಗರ" ಸಂಕ್ರಾಂತಿ ಹಬ್ಬವನ್ನು ಆಚರಿಸಲಾಯಿತು. ಸುಗ್ಗಿ ಹಾಡು, ಜಾನಪದ ಗೀತೆಗಳನ್ನು ಹಾಡಲಾಯಿತು ಮತ್ತು ಎಳ್ಳು ಬೆಲ್ಲ ವಿತರಿಸಲಾಯಿತು.

ಫೆಬ್ರವರಿಯಲ್ಲಿ ರಥ ಸಪ್ತಮಿ ಹಬ್ಬದ ನಿಮಿತ್ತ ಲಲಿತಾ ಸಹಸ್ರನಾಮ ಪಠಣ ಮತ್ತು ಆದಿತ್ಯ ಹೃದಯ, ದೇವಿ ಭಕ್ತಿ ಗೀತೆಗಳನ್ನು ಹಾಡಲಾಯಿತು.

**ಗಾಯತ್ರಿ ವಿಶ್ವನಾಥ್**
ಸಂಚಾಲಕಿ

## ಸ್ಮರಣಾರ್ಥ ಭೋಜನ ವ್ಯವಸ್ಥೆ ದಾನಿಗಳಲ್ಲಿ ಮನವಿ

**ಮಾನ್ಯ ಸದಸ್ಯ ಬಂಧುಗಳೇ,**

ತಾವು ತಮ್ಮ ಪೂರ್ವಜರು, ಹಿರೀಕರು, ಮಾತಾಪಿತೃಗಳು ಹಾಗೂ ಇತರೆ ಸಂಬಂಧಿಗಳ ಹೆಸರಿನಲ್ಲಿ ಅವರ ಗೌರವ ಮತ್ತು ಪುಣ್ಯ ಸ್ಮರಣಾರ್ಥವಾಗಿ ಮುದುವಟ್ಟು ಸ್ಥಾಪಿಸಿ ವರುಷಕ್ಕೊಂದು ದಿನ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ ಭೋಜನ ಏರ್ಪಡಿಸುತ್ತಿರುವುದು ಸರಿಯಷ್ಟೇ. ಇಂತಹ ಒಂದು ಅವಕಾಶವನ್ನು ನಿರ್ವಹಿಸುವ ಜವಾಬ್ಧಾರಿಯನ್ನು ಸಮಿತಿಗೆ ವಹಿಸಿರುವುದು ನಮ್ಮ ಪುಣ್ಯವಿಶೇಷವೇ ಸರಿ ಮತ್ತು ಈ ಹೊಣೆಯನ್ನು ನಾವು ಅತ್ಯಂತ ಸಮರ್ಥವಾಗಿ ಮತ್ತು ಶ್ರದ್ಧಾಪೂರ್ವಕವಾಗಿ ನೆರವೇರಿಸುತ್ತಾ ಬಂದಿದ್ದೇವೆ.

ಆದರೆ ಈಗ ಬ್ಯಾಂಕ್ ಬಡ್ಡಿ ದರಗಳಲ್ಲಿ ತೀವ್ರ ಇಳಿಕೆ ಆಗಿರುವುದರಿಂದಲೂ, ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳ ಸಂಖ್ಯೆ ವರುಷದಿಂದ ವರುಷಕ್ಕೆ ಹೆಚ್ಚುತ್ತಿರುವುದರಿಂದಲೂ, ಎಲ್ಲಾ ಅಗತ್ಯವಸ್ತುಗಳ ದರದಲ್ಲಿ ತೀವ್ರ ಏರಿಕೆಯಾಗಿರುವುದರಿಂದಲೂ ಹಿಂದಿನ ಮುದುವಟ್ಟಿನ ಹಣದ ಮೇಲೆ ಬರುತ್ತಿರುವ ಬಡ್ಡಿಯಿಂದ ಭೋಜನ ವ್ಯವಸ್ಥೆ ಮಾಡುವುದು ಕಷ್ಟಸಾಧ್ಯವಾಗಿರುತ್ತದೆ. ಈಗಿರುವ ವಿದ್ಯಾರ್ಥಿಗಳಿಗೆ ಒಂದು ದಿನದ ಭೋಜನ ವ್ಯವಸ್ಥೆ ಮಾಡಲು ಕನಿಷ್ಟ ರೂ.5000/–ದ ಅಗತ್ಯವಿರುತ್ತದೆ. ಇಷ್ಟು ಹಣ ವಾರ್ಷಿಕವಾಗಿ ಬ್ಯಾಂಕ್ ಬಡ್ಡಿಯ ರೂಪದಲ್ಲಿ ಸಂದಾಯವಾಗುವ ರೀತಿಯಲ್ಲಿ ತಾವು ತಮ್ಮ ಮುದುವಟ್ಟಿನ ಮೊತ್ತವನ್ನು ಹೆಚ್ಚಿಸಬೇಕಿರುತ್ತದೆ. ಸುಮಾರು ಕನಿಷ್ಠ 70,000/–(ರೂಪಾಯಿ ಎಪ್ಪತ್ತು ಸಾವಿರ, ಹೆಚ್ಚೂ ಕೊಡಬಹುದು) ರೂಪಾಯಿಗಳನ್ನು ಮುದುವಟ್ಟಾಗಿಟ್ಟರೆ ಈ ವಾರ್ಷಿಕ ಒಂದು ದಿನದ ಭೋಜನ ವ್ಯವಸ್ಥೆಯನ್ನು ತಮ್ಮ ಸ್ಮರಣೆಯ ಹಿರಿಯರ ನೆನಪಲ್ಲಿ ಅತ್ಯಂತ ಸಮರ್ಪಕವಾಗಿ ನಡೆಸಬಹುದಾಗಿರುತ್ತದೆ. ಹೀಗಾಗಿ ಹೊಸದಾಗಿ ಸ್ಮರಣಾರ್ಥ ಮುದುವಟ್ಟು ಸ್ಥಾಪಿಸುವರು ರೂ.70 ಸಾವಿರ ಮತ್ತು ಈಗಾಗಲೇ ಮುದುವಟ್ಟು ಸ್ಥಾಪಿಸಿರುವವರು ಈಗಿರುವ ಮೊತ್ತದ ಜೊತೆಗೆ 70 ಸಾವಿರಕ್ಕೆ ಹೊಂದಿಕೆಯಾಗುವ ಹೆಚ್ಚಿಗೆ ಮೊತ್ತ (ಉದಾಹರಣಗೆ ಈಗ 40 ಸಾವಿರ ಮುದುವಟ್ಟಿದ್ದರೆ ಹೆಚ್ಚುವರಿಯಾಗಿ 30 ಸಾವಿರ ನೀಡುವುದು) ನೀಡಿ ತಮ್ಮ ಹಿರಿಯರ ಸ್ಮರಣಾರ್ಥ ಭೋಜನ ವ್ಯವಸ್ಥೆಯನ್ನು ನಿರಂತರವಾಗಿ ಮುಂದುವರಿಸಲು ಅನುವು ಮಾಡಿಕೊಡಬೇಕೆಂದು ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತಿದ್ದೇವೆ. ಹಾಗೆಯೇ ಮುದುವಟ್ಟು ಸ್ಥಾಪಿಸದೆಯೂ ವಾರ್ಷಿಕವಾಗಿ ರೂ. 5 ಸಾವಿರ ನೀಡಿ ತಮ್ಮ ಹಿರಿಯರ ಸ್ಮರಣಾರ್ಥ ಒಂದು ದಿನದ ಭೋಜನದ ವ್ಯವಸ್ಥೆಯನ್ನು ಮಾಡಬಹುದಾಗಿರುತ್ತದೆ.

**– ಡಾ.ಎನ್. ಸತ್ಯಪ್ರಕಾಶ್**
ಗೌರವ ಕಾರ್ಯದರ್ಶಿ

## ಗಣಕೀಕರಣ ಉಪಸಮಿತಿ

ಶ್ರೀ ಜಿ.ವಿ. ರಮೇಶ್ : ಸಂಚಾಲಕರು
ಶ್ರೀ ಎಸ್.ಎಂ. ನಾಗರಾಜ್ : ಸದಸ್ಯರು
ಶ್ರೀಮತಿ ಸುಧಾಪ್ರಸಾದ್ : ಸದಸ್ಯರು
ಶ್ರೀ ಎನ್.ಡಿ. ರವಿ : ಸದಸ್ಯರು

ಎಲ್ಲಾ ಪದಾಧಿಕಾರಿಗಳು

## ಕ್ಷೇಮ ಸಮಾಚಾರ ಆಂತರಿಕ ಪತ್ರಿಕೆ ಉಪಸಮಿತಿ

ಡಾ॥ ಎ.ವಿ. ಪ್ರಸನ್ನ : ಪ್ರಧಾನ ಸಂಪಾದಕರು
ಶ್ರೀ ಎಲ್.ಎನ್. ಪ್ರಸಾದ್ : ಸದಸ್ಯರು
ಶ್ರೀಮತಿ ಕೆ. ಶೀಲಾ : ಸದಸ್ಯರು
ಶ್ರೀಮತಿ ಸುಮಾ ಪ್ರಕಾಶ್ : ಸದಸ್ಯರು

ಎಲ್ಲಾ ಪದಾಧಿಕಾರಿಗಳು

## ವಿದ್ಯಾರ್ಥಿ /ವಿದ್ಯಾರ್ಥಿನಿಲಯದ ಉಪಸಮಿತಿ

ಶ್ರೀ ಎನ್. ಶಿವಮೂರ್ತಿ : ಸಂಚಾಲಕರು
ಶ್ರೀ ನಂಜುಂಡಸ್ವಾಮಿ ಎಂ.ಎಸ್ : ಸದಸ್ಯರು
ಶ್ರೀಮತಿ ಸುಮಾ ಪ್ರಕಾಶ್ : ಸದಸ್ಯರು
ಶ್ರೀ ಪ್ರಕಾಶ್ ಎಂ.ಜಿ : ಸದಸ್ಯರು
ಶ್ರೀ ನಾಗರಾಜ್ ಕೆ.ಎಸ್ : ಸದಸ್ಯರು

## ಕ್ರೀಡೆಗಳು ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಉಪಸಮಿತಿ

ಶ್ರೀಮತಿ ಸುಮಾ ಪ್ರಕಾಶ್ : ಸಂಚಾಲಕರು
ಶ್ರೀ ಎನ್. ಶಿವಮೂರ್ತಿ : ಸದಸ್ಯರು
ಶ್ರೀ ನಾಗರಾಜ್ ಎಸ್.ಎಂ. : ಸದಸ್ಯರು
ಶ್ರೀಮತಿ ಸುಧಾ ಪ್ರಸಾದ್ : ಸದಸ್ಯರು
ಶ್ರೀ ಶೇಷಾದ್ರಿ .ಆರ್ : ಸದಸ್ಯರು

ಎಲ್ಲಾ ಪದಾಧಿಕಾರಿಗಳು

## ಆರ್ಥಿಕ ಉಪಸಮಿತಿ

ಶ್ರೀ ಗುರುದತ್ತ ಪಿ.ಎಸ್ : ಸಂಚಾಲಕರು
ಶ್ರೀಮತಿ ಕೆ. ಶೀಲಾ : ಸದಸ್ಯರು
ಶ್ರೀ ರಮೇಶ್ .ಜಿ.ವಿ : ಸದಸ್ಯರು

ಎಲ್ಲಾ ಪದಾಧಿಕಾರಿಗಳು

## ಕಟ್ಟಡದ ಉಪಸಮಿತಿ

ಶ್ರೀ ಜಿ.ವಿ. ರಮೇಶ್ : ಸಂಚಾಲಕರು

ಎಲ್ಲಾ ಪದಾಧಿಕಾರಿಗಳು

## ಮಹಿಳಾ ವಿಭಾಗ ಉಪಸಮಿತಿ

ಶ್ರೀಮತಿ ಕೆ. ಶೀಲಾ
ಶ್ರೀಮತಿ ಸುಮಾ ಪ್ರಕಾಶ್
ಶ್ರೀಮತಿ ಮೇಖಲಾ ದ್ವಾರಕಾನಾಥ್

PRINTED MATTER BOOK-POST



**ಶ್ರೀಮತಿ ಶಾರದಮ್ಮ ಎಂ.ವಿ. ದೇವರಯ್ಯ ವಿದ್ಯಾರ್ಥಿನಿಯರ ನಿಲಯ**

ನಂ.344, 36ನೇ 'ಎ' ಕ್ರಾಸ್, 9ನೇ ಮುಖ್ಯರಸ್ತೆ,
5ನೇ ಬ್ಲಾಕ್, ಜಯನಗರ, ಬೆಂಗಳೂರು–560041

Smt./Sri.....................................................

...............................................................

...............................................................

If undelivered please return to :

Reg. No. 246/34-35

The Secretary
**BABBOORKAMME SEVA SAMITHI (R.)**
Dewan Bahadur K. Ramaswamy Students Home
No. 17, Seshadri Road, Bangalore - 560 009
Phone: 22281848, Cell : 9380301904 | www.babboorkamme.org

Babboorkamme Kshema Samachara, Printed for and on behalf of Babboorkamme Seva Samithi,
Edited by : Dr. N. Sathyaprakash and Printed at Padmashree Printers Bangalore - 560 010, Ph. 9880083321

ಬನ್ನಿ ಸಮಿತಿಯ ಏಳಿಗೆಗಾಗಿ ಶ್ರಮಿಸೋಣ